ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

email : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು–570005.

ಎಸಿ3/756/2019–20

ದಿನಾಂಕ. 24.08.2021.

## ಸುತ್ತೋಲೆ

**ವಿಷಯ:** ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದ ಪಿ.ಯು. ಬೋರ್ಡ್ ಹೊರತು ಪಡಿಸಿ ಇತರೆ ಬೋರ್ಡ್‌ಗಳ ವಿದ್ಯಾರ್ಥಿಗಳ ಅರ್ಹತಾ ಪ್ರಮಾಣ ಪತ್ರದ ಬಗ್ಗೆ.

**ಉಲ್ಲೇಖ:** ಈ ಕಛೇರಿಯ ಇದೇ ಸಮ ಸಂಖ್ಯೆಯ ದಿನಾಂಕ:24.07.2020.

******

ಕರ್ನಾಟಕ ಸರ್ಕಾರದ ಪಿ.ಯು.ಬೋರ್ಡ್ ಹೊರತುಪಡಿಸಿ, Council of Board of School Education in India (COBSE) ಇಲ್ಲಿಂದ ಮಾನ್ಯತೆ ಪಡೆದ ಇತರೆ ಬೋರ್ಡ್‌ಗಳಲ್ಲಿ (10+2) ತೇರ್ಗಡೆ ಹೊಂದಿದೆ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಅರ್ಹತಾ ಪ್ರಮಾಣ ಪತ್ರ ಪಡೆದ ನಂತರವೇ ಸ್ನಾತಕ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡಬೇಕಾಗಿತ್ತು. ಆದರೆ, COVID-19 ಸಾಂಕ್ರಮಿಕ ರೋಗ ಮುಂದುವರೆದಿರುವ ನಿಮಿತ್ತ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಬಂದು ಹೋಗಲು ಅನಾನುಕೂಲವಾಗುವುದರಿಂದ ಇದೊಂದು ವಿಚಿತ್ರ ವಿಶೇಷ ಸನ್ನಿವೇಶವೆಂದು ಭಾವಿಸಿ, 2021–22ನೇ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಆಯಾ ಕಾಲೇಜಿನಲ್ಲಿಯೇ ಕರ್ನಾಟಕ ಸರ್ಕಾರದ ಪಿ.ಯು ಬೋರ್ಡ್ ಹೊರತುಪಡಿಸಿ,(COBSE)ಯಿಂದ ಮಾನ್ಯತೆ ಪಡೆದ ಇತರೆ ಬೋರ್ಡ್‌ಗಳಲ್ಲಿ (10+2) ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಪರಿಶೀಲಿಸಿ, (COBSE ಯಿಂದ ಮಾನ್ಯತೆ ಪಡೆದ Board ಗಳ ವಿವರಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ) ಅರ್ಹತಾ ಪ್ರಮಾಣ ಪತ್ರದ ಶುಲ್ಕ ರೂ. 4950/–ಗಳನ್ನು ಪ್ರತಿ ವಿದ್ಯಾರ್ಥಿಗಳಿಂದ ಪಡೆದು (ಹೊರ ರಾಜ್ಯದ/ವಿದೇಶಿ ವಿದ್ಯಾರ್ಥಿಗಳಿಗೆ Additional Registration Fees ಪಡೆಯುವುದು) ನಂತರ ನಿಯಾಮಾನುಸಾರ ಇತರೆ ಶುಲ್ಕಗಳನ್ನು ಪಡೆದು ಪ್ರವೇಶಾತಿ ನೀಡುವಂತೆ ತಿಳಿಸಲಾಗಿದೆ. ಈ ರೀತಿ ಪಡೆದ ಅರ್ಹತಾ ಪ್ರಮಾಣ ಪತ್ರದ ಶುಲ್ಕವನ್ನು ಕ್ರೂಢೀಕರಿಸಿ ವಿಶ್ವವಿದ್ಯಾನಿಲಯದ GRA ಖಾತೆಗೆ ಜಮಾ ಮಾಡಿ ಮೂಲ ರಶೀದಿ/ಚಲನ್ ಮತ್ತು ಅಂತಹ ವಿದ್ಯಾರ್ಥಿಗಳ ಯಾದಿಯನ್ನು ಪ್ರವೇಶಾತಿ ಕೊನೆಯ ದಿನಾಂಕದ ನಂತರ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಕುಲಸಚಿವರಿಂದ ಕರಡು ಅನುಮೋದಿಸಿದೆ.

27/8
ಉಪ ಕುಲಸಚಿವ (ಶೈಕ್ಷಣಿಕ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-೫೭೦ ೦೦೫

ಇವರಿಗೆ,

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ಬಿ.ಎಸ್ಸಿ/ಬಿ.ಸಿ.ಎ./ ಬಿ.ಕಾಂ./ಬಿ.ಬಿ.ಎ/ಬಿ.ಬಿ.ಎ(ಟೂರಿಸಂ ಅಂಡ್ ಟ್ರಾವೆಲ್)/ಬಿ.ಎ(ಫೈನ್ ಆರ್ಟ್ಸ್)/ಬಿ.ಬಿ.ಎ(ಟೂರಿಸಂ & ಹಾಸ್ಪಿಟಲಿಟಿ) /ಬಿ.ಎಸ್.ಡಬ್ಲ್ಯೂ./ಬಿ.ವಿಶ್ಯುಲ್ ಆರ್ಟ್ಸ್.(ನಾಲ್ಕು ವರ್ಷ) /ಬಿ.ಎ.ಎಸ್.ಎಲ್.ಪಿ/ ಘಟಕ/ ಸ್ವಾಯತ್ತ ಹಾಗೂ ಸಂಯೋಜಿತ ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.

2. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– ಮಾಹಿತಿಗಾಗಿ.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು
5. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು
6. ನಿರ್ದೇಶಕರು, ಪಿ.ಎಂ.ಇ. ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
7. ಸಂಯೋಜಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು– ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.
8. ಶೈಕ್ಷಣಿಕ/ಪರೀಕ್ಷಾ ವಿಭಾಗದ ಎಲ್ಲಾ ಉಪ ಕುಲಸಚಿವ/ ಸಹಾಯಕ ಕುಲಸಚಿವ/ ಅಧೀಕ್ಷಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
10. ಆಡಳಿತ ಶಾಖೆ, ಶೈಕ್ಷಣಿಕ ವಿಭಾಗದ ಎಲ್ಲಾ ಕಾರ್ಯ ನಿರ್ವಾಹಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಇವರುಗಳ ಆಪ್ತ ಸಹಾಯಕರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
12. ಕಛೇರಿ ಪ್ರತಿ.